ಕೈಮಗ್ಗ ಮತ್ತು ವಿದ್ಯುತ್ ಮಗ್ಗ ವಲಯಗಳ ಅಭಿವೃದ್ಧಿ

278 : (421)

ಶ್ರೀ ಹ್ಯಾರಿಸ್ ಎನ್.ಎ (ಶಾಂತಿನಗರ)

ಪ್ರಶ್ನೆ

ಅ) ರಾಜ್ಯದಲ್ಲಿರುವ ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ವಲಯಗಳ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಆ) ಸದರಿ ವಲಯಗಳಲ್ಲಿ ವೃತ್ತಿಪರರಾಗಿರುವ ನೇಕಾರರ ಸಂಖ್ಯೆ ಎಷ್ಟು; (ವಿವರ ಒದಗಿಸುವುದು)

ಇ) ಕೈಮಗ್ಗ ವಲಯದ ನೇಕಾರರಿಗೆ ಒದಗಿಸಿಕೊಡುತ್ತಿರುವ ಯೋಜನೆಗಳ ಸೌಲಭ್ಯವನ್ನು ವಿದ್ಯುತ್‌ಮಗ್ಗ ನೇಕಾರರಿಗೂ ವಿಸ್ತರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ.,

ಈ) ಕೈಮಗ್ಗ ವಲಯವು ವಿವಿಧ ಕಾರಣಗಳಿಂದ ಕ್ಷೀಣಿಸುತ್ತಿರುವುದರಿಂದ ವಿದ್ಯುತ್‌ಮಗ್ಗ ಕ್ಷೇತ್ರವನ್ನು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು.,

ಉ) ನೇಕಾರಿಕೆಯಲ್ಲಿ ತೊಡಗಿಸಿಕೊಂಡಿರುವ ಕಾರ್ಮಿಕ ವರ್ಗದವರಿಗೆ ಬಿಪಿಎಲ್ ಕಾರ್ಡ್ ನೀಡಿಕೆ ಮತ್ತು ಇಎಸ್‌ಐ ಸೌಲಭ್ಯವನ್ನು ಒದಗಿಸಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೆ., ಸರ್ಕಾರ ಜಾರಿಗೊಳಿಸುತ್ತಿರುವ ಯೋಜನಾ ಸೌಲಭ್ಯಗಳು ಸರಳ ಕಾನೂನು ನಿಯಮಗಳಡಿಯಲ್ಲಿ ದೊರಕುವಂತೆ ಮಾಡಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್.ವರ್ತೂರು ಪ್ರಕಾಶ್ (ಜವಳಿ ಸಚಿವರು ಕರ್ನಾಟಕ ಸರ್ಕಾರ)

ಉತ್ತರ

ಅ) ರಾಜ್ಯದಲ್ಲಿರುವ ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ವಲಯಗಳ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಈ ಕೆಳಕಂಡಂತಿದೆ.

ಕೈಮಗ್ಗ ವಲಯ ಯೋಜನೆಗಳು.

1. ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆಯಡಿ ಕೈಮಗ್ಗ ಕ್ಲಸ್ಟರ್‌ಗಳ ಅಭಿವೃದ್ಧಿ
2. ಗುಂಪು ವಿಮಾ ಯೋಜನೆ (ಮಹತ್ಮಾಗಾಂಧಿ ಬುನಕರ್ ಬಿಮಾ ಯೋಜನೆ)
3. ಆರೋಗ್ಯ ವಿಮಾ ಯೋಜನೆ

4. ದುರ್ಬಲ ವರ್ಗದವರಿಗೆ ಸೀರೆ, ಪಂಚೆ, ಇತರೆ ವಿತರಣೆ.
5. ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ ಯೋಜನೆಯಡಿ ನೇಕಾರರ ಮಕ್ಕಳಿಗೆ ವಿದ್ಯಾರ್ಥಿ ವೇತನ ಮತ್ತು ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಕಚ್ಚಾಮಾಲಿನ ಖರೀದಿ ಮೇಲೆ ಸಹಾಯಧನ ಒದಗಿಸುವುದು
6. ಕೈಮಗ್ಗ ಉತ್ಪನ್ನಗಳ ಮಾರುಕಟ್ಟೆ (20% ರಿಬೇಟ್ ಸ.ಸಂ.)
7. ಕೈಮಗ್ಗ ನೇಕಾರರ ಉತ್ಪನ್ನಗಳಿಗೆ ಉತ್ತಮ ಮಾರುಕಟ್ಟೆ ಒದಗಿಸಲು ಕೇಂದ್ರ ಸರ್ಕಾರದ ಯೋಜನೆಯಡಿ ಕೈಮಗ್ಗ ಮೇಳಗಳ ಆಯೋಜನೆ.
8. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೆ ನೇಕಾರರ ವಿಶೇಷ ಪ್ಯಾಕೇಜ್ ಯೋಜನೆ.
9. ಕೈಮಗ್ಗ ನೇಕಾರರ ಮಿತವ್ಯಯ ನಿಧಿ ಯೋಜನೆ.
10. ನೇಕಾರರ ವಿಶೇಷ ಪ್ಯಾಕೇಜ್
11. ಸುವರ್ಣ ವಸ್ತ್ರ ನೀತಿ ಯೋಜನೆಯಡಿ ಕೈಮಗ್ಗ ನೇಕಾರರಿಗೆ ತರಬೇತಿ ಹಾಗು ಕೌಶಲ್ಯ ಅಭಿವೃದ್ಧಿ ಕೇಂದ್ರ ಸ್ಥಾಪನೆ.
12. ವಸತಿ ಕಾರ್ಯಗಾರ
13. ವಿಶೇಷ ಘಟಕ ಯೋಜನೆ
14. ಗಿರಿಜನ ಉಪ ಯೋಜನೆ.

ವಿದ್ಯುತಮಗ್ಗ ವಲಯ ಯೋಜನೆಗಳು

1. 20 ಹೆಚ್.ಪಿ. ವರೆಗಿನ ವಿದ್ಯುತ್‌ಮಗ್ಗ ಹಾಗೂ ಮಗ್ಗ ಪೂರ್ವ ಘಟಕಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಸಹಾಯಧನ.
2. ಎಕ್ಸ್‌ಪ್ರೆಸ್ ಫೀಡರ್ ಯೋಜನೆಯಡಿ ನಿರಂತರ ವಿದ್ಯುತ್ ಸರಬರಾಜು.
3. ವಿಶೇಷ ಘಟಕ ಯೋಜನೆ
4. ಗಿರಿಜನ ಉಪ ಯೋಜನೆ
5. 02 ವಿದ್ಯುತ್‌ಮಗ್ಗ ಒದಗಿಸುವ ಯೋಜನೆ
6. ವಿದ್ಯುತ್‌ಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಶೇರು ಬಂಡವಾಳ

The following programme are being implemented by the Government for the development of Handloom and Power loom sectors in the State.

Handloom Sector schemes:

1. Integrated Handloom Development Scheme (Development of Handloom cluster)
2. Group Insurance Scheme (Mahatma Gandhi Bunkar Bhima Yojane)
3. Health Insurance Scheme
4. Distribution of Saree, Dhoti to weaker sections
5. Scholarship to weavers children & providing subsidy on purchase of raw material by the handloom weavers co-operative societies.
6. Marketing of Handloom products (20% rebate)
7. In order to provide better marketing facilities for Handloom products organize handloom expo under GOI schemes.
8. Special package scheme to KHDC
9. Thrift fund scheme to Handloom weavers
10. Weavers Special Package
11. Providing training to handloom weavers and establishment of skill development center under Suvarna Vastra Neethi.
12. Living cum work shed
13. Special component plan
14. Tribal Sub-plan.

Power Sector Scheme

1. Providing Power Subsidy to Power looms & Pre loom units up to 20HP.
2. Providing regular power supply through Express Feeder.
3. Special Component Scheme
4. Tribal Sub-Plan.
5. Schemes for providing 02 Power looms
6. Share Capital to Power loom weavers Co-operative Societies.

ಆ) ಕೈಮಗ್ಗ ವಲಯದ ವೃತ್ತಿಪರ ನೇಕಾರರ ಸಂಖ್ಯೆ:39932(2009–10ನೇ ಸಾಲಿನ ಗಣತಿ ಪ್ರಕಾರ)

ವಿದ್ಯುತ್‌ಮಗ್ಗ ವಲಯದ ವೃತ್ತಿಪರ ನೇಕಾರರ ಸಂಖ್ಯೆ:127535(1995–96ನೇ ಸಾಲಿನ ಗಣತಿ ಪ್ರಕಾರ)

ಕೈಮಗ್ಗ ವಲಯದ ನೇಕಾರರಿಗೆ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಸೌಲಭ್ಯವನ್ನು ವಿದ್ಯುತ್‌ಮಗ್ಗ ನೇಕಾರರಿಗೂ ವಿಸ್ತರಿಸುವ ಪ್ರಸ್ತಾವನೆಗಳು (ಆರೋಗ್ಯ ವಿಮಾ ಯೋಜನೆ ಮತ್ತು ನೇಕಾರರ ಕಲ್ಯಾಣ ಯೋಜನೆ) ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿದೆ.

No.of working weavers in the Handloom sector is 39932 (As per Census of 2009-10)

No. of working weavers in the Power loom sector is 127535 (As per Census of 1995-96)

The proposal for extending the benefit of Health Insurance scheme and Weavers welfare scheme to power loom weavers is under examination by the Government.

ಈ) ಕೈಮಗ್ಗ ವಲಯವು ವಿವಿಧ ಕಾರಣಗಳಿಂದ ಕ್ಷೀಣಿಸುತ್ತಿರುವುದರಿಂದ ವಿದ್ಯುತ್‌ಮಗ್ಗ ಕ್ಷೇತ್ರವನ್ನು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಲು ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

1. 20 ಹೆಚ್.ಪಿವರೆಗಿನ ವಿದ್ಯುತ್‌ಮಗ್ಗ ಮತ್ತು ಮಗ್ಗ ಪೂರ್ವ ಘಟಕಗಳಿಗೆ ರಿಯಾಯಿತಿ ದರದಲ್ಲಿ ವಿದ್ಯುತ್ ಸಹಾಯಧನ.

2. ಎಕ್ಸ್‌ಪ್ರೆಸ್ ಫೀಡರ್ ಯೋಜನೆಯಡಿ ನಿರಂತರ ವಿದ್ಯುತ್ ಸರಬರಾಜು

3. ವಿಶೇಷ ಘಟಕ ಯೋಜನೆ

4. ಗಿರಿಜನ ಉಪ ಯೋಜನೆ

5. 02 ವಿದ್ಯುತ್‌ಮಗ್ಗ ಒದಗಿಸುವ ಯೋಜನೆ

6. ವಿದ್ಯುತ್‌ಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಶೇರು ಬಂಡವಾಳ

ವಿದ್ಯುತ್‌ಮಗ್ಗ ಕ್ಷೇತ್ರವನ್ನು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹಿಸಲಾಗುತ್ತಿದೆ.

As the Handloom sector is in deteriorating stage. The following schemes are being implemented to encourage the power loom sector.

1. Providing Power Subsidy to Power looms & Pre loom units up to 20HP.

2. Providing regular power supply through Express Feeder.

3. Special Component Plan.

4. Tribal Sub-plan

5. Schemes for providing 02 Power looms

6. Share Capital to Power loom weavers Co-operative Societies.

ಉ) ಬಡತನದ ರೇಖೆಗಿಂತ ಕೆಳಗಿರುವ ಪ್ರತಿಯೊಬ್ಬ ನಾಗರಿಕರಿಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ಬಿಪಿಎಲ್ ಕಾರ್ಡ್ ವಿತರಿಸಲಾಗುತ್ತಿದೆ. ಕಂಪನಿ ಆಕ್ಟ್ ಪ್ರಕಾರ ನೊಂದಣಿಯಾದ ಘಟಕಗಳ ಕಾರ್ಮಿಕರಿಗೆ ಇಎಸ್‌ಐ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

ಸರ್ಕಾರ ಜಾರಿಗೊಳಿಸುತ್ತಿರುವ ಯೋಜನೆಗಳ ಮಾರ್ಗಸೂಚಿಗಳನ್ನು ಈ ಕೆಳಕಂಡಂತೆ ಸರಳೀಕರಣಗೊಳಿಸಿ ವ್ಯಾಪಕ ಪ್ರಚಾರ ನೀಡಿ ಆರ್ಹ ಫಲಾನುಭವಿಗಳಿಗೆ ಸೌಲಭ್ಯಗಳು ದೊರಕುವಂತೆ ಕ್ರಮ ಕೈಗೊಳ್ಳಲಾಗಿದೆ.

1) ಅರ್ಜಿ ನಮೂನೆ ಸರಳೀಕರಣ
2) ಜಿಲ್ಲಾ ಮಟ್ಟದಲ್ಲಿ ಫಲಾನುಭವಿಗಳ ಗುರುತಿಸುವುದು ಹಾಗೂ ಮಂಜೂರಾತಿ ನೀಡುವುದು.
3) ಫಲಾನುಭವಿಗಳಿಗೆ ಮಂಜೂರಾದ ಮೊತ್ತವನ್ನು ಚೆಕ್ ಮೂಲಕ ನೀಡುವುದು.

BPL cards are being issued by the Food and Civil Supply Department to the citizens who are under below poverty line.

ESI facilities are provided to the labourers who were working in the Units registered under the companies Act.

Following action has been taken to simplify the guidelines of the schemes implemented by the Government and wide publicity is given so that the benefits are reached to the eligible benefiaries.

1. Simplification of application form
2. Identification of beneficiaries & sanction of assistance at district level
3. Release of assistance through cheques.